**ಪ್ರಧಾನ ಸಿವಿಲ್ ಮತ್ತು ಜೆಎಮ್‌ಎಫ್ ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.**

ಸಿಸಿ ನಂ.**712/2025**

| | | |
|---|---|---|
| ಪಿರ್ಯಾದಿ | : | ಶ್ರೀ ವಿನೋದಕುಮಾರ ತಂದೆ ಉಮಾಪತಿ ಬಿರಾದರ, ವಯಸ್ಸುಃ 36 ವರ್ಷ, ಉಃ ವ್ಯಾಪಾರ, ಸಾಃ ಬಸವೇಶ್ವರ ನಗರ, ಯಾದಗಿರಿ, ತಾಃ ಮತ್ತು ಜಿಃ ಯಾದಗಿರಿ. |
| ಆರೋಪಿ | : | ಶ್ರೀ ಶ್ರೀನಿವಾಸ ಸಿ.ಎಲ್ ತಂದೆ ಚನ್ನಯ್ಯಸ್ವಾಮಿ ಸಿ.ಎಂ, ಸಾಃ ಎಂ.ಎಫ್-53/2, ಬಲಮುರಿ ಗಣೇಶ ಮಂದಿರದ ಸಮೀಫ ಮೂರನೇ ಕ್ರಾಸ್, ನಂದಿನಿ ಲೇಔಟ್, ಬೆಂಗಳೂರು ಉತ್ತರ, ಬೆಂಗಳೂರು. |

**ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ 351 ರ ಅಡಿಯಲ್ಲಿ ಆರೋಪಿತನ ಹೇಳಿಕ**

ಪ್ರಶ್ನೆಃ1ಃ ನೀವು ದೂರುದಾರರ ವಿಚಾರಣೆಯನ್ನು ಕೇಳಿದ್ದೀರಾ?

ಆರೋಪಿಯ ಉತ್ತರಃ

ಪ್ರಶ್ನೆ2 : ಪ್ರಾಸಾ-1 ಶ್ರೀ ವಿನೋದಕುಮಾರ ತಂದೆ ಉಮಾಪತಿ ಬಿರಾದರ ಇವರು ಪಿರ್ಯಾದಿದಾರರಾಗಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ಪಿರ್ಯಾದಿದಾರರು ಮತ್ತು ಆಪಾದಿತನಾದ ನೀವು ಪರಿಚಯಸ್ಥರಾಗಿರುತ್ತೀರಿ ಹಾಗೂ ಸದರಿ ಪರಿಚಯದ ಆಧಾರದ ಮೇಲೆ ನೀವು ದೂರುದಾರರಿಂದ ದಿನಾಂಕ **24.02.2024** ರಂದು ರೂ.**3,00,000/-**ನಗದು ಹಣವನ್ನು ಹಾಗೂ ಆನತಂರ ದಿನಾಂಕ **17-09-2024** ರಂದು ರೂ.**12,00,000/-** ಅಂದರೆ ಒಟ್ಟು ರೂ. **15,00,000/-** ಹಣವನ್ನು ದೂರದಾರದಿಂದ ಸಾಲವಾಗಿ ಪಡೆದುಕೊಂಡು ದೂರುದಾರರಿಗೆ ಬೆಂಗಳೂರಿನ ನಂದಿನಿ ಲೇಓಟ್ ಎಸ್.ಬಿ.ಐ ಶಾಕಿಯ ನೇಮಕಾತಿಯ ಸಹಿ ಮಾಡಿದ **603179** ಸಂಖ್ಯೆಯ ಚಕನ್ನು ನೀಡಿದ್ದು ಇರುತ್ತದೆ ಎಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುವಿರಿ?

ಆರೋಪಿಯ ಉತ್ತರಃ

ಪ್ರಶ್ನೆಃ 3 ಃ ಪ್ರಾಸಾ 1 ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮುಂದುವರೆದು, ಆನಂತರ ನೀವು ಹೇಳಿದಂತೆ ನಿಮ್ಮ ಖಾತೆಯ ಸದರಿ ಚಕನ್ನು ದೂರುದಾರರು ದಿನಾಂಕ **15-04-2025** ರಂದು ನಗದೀರಣಕ್ಕಾಗಿ ತಾವು ಖಾತೆ ಹೊಂದಿರುವ ಯಾದಗಿರಿ ಸುಕೊ ಸೌಹರ್ದ ಸಹಕಾರಿ ಬ್ಯಾಂಕಿನಲ್ಲಿ ಹಾಜರು ಪಡಿಸಿದಾಗ "Funds Insufficient" ಎಂಬ ಹಿಂಬರಹದೊಂದಿಗೆ ಅಮಾನ್ಯಗೊಂಡು ಚೆಕ್ಕನ್ನು ದಿನಾಂಕ **16-04-2025** ರಂದು ವಾಪಸ್ಸು ನೀಡಿರುತ್ತಾರೆ ಎಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುವಿರಿ?

ಆರೋಪಿಯ ಉತ್ತರಃ

ಪ್ರಶ್ನೆ 4ಃ ಪ್ರಾಸಾ 1 ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮುಂದುವರೆದು, ನಂತರ ಪಿರ್ಯಾದುದಾರರು ತಮ್ಮ ವಕೀಲರ ಮೂಲಕ ದಿನಾಂಕ **25-04-2025** ರಂದು ಅಪಾದಿತನಾದ ನಿಮ್ಮ ವಿಳಾಸಕ್ಕೆ ನೊಂದಾಯಿತ ಅಂಚೆಯ ಮೂಲಕ ತಿಳುವಳಿಕೆ ಪತ್ರವನ್ನು ಕಳುಹಿಸಿದ್ದು, ಸದರಿ ನೋಟಿಸ್‌ನ್ನು ನೀವು ತೆಗೆದುಕೊಳ್ಳದ ಕಾರಣ ದಿನಾಂಕ **13.05.2025** ರಂದು ದೂರುದಾರರ ವಕೀಲರಿಗೆ ಮರಳಿ ಬಂದಿರುತ್ತದೆ. ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲದಿದ್ದರು ದೂರುದಾರರಿಗೆ ಚೆಕ್‌ನ್ನು ನೀಡಿ ನಂತರ ಚೆಕ್ ಮೊತ್ತವನ್ನು ಪಾವತಿ ಮಾಡದೆ ಇರುವುದರ ಮೂಲಕ ವರ್ಗಾವಣೀಯ ಲಿಖಿತ ಕಾಯ್ದೆ ಕಲಂ 138 ರಡಿ ಅಪರಾಧ ಎಸಗಿದ್ದೀರಿ ಎಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುವಿರಿ?

ಆರೋಪಿಯ ಉತ್ತರಃ

ಪ್ರಶ್ನೆ **5**ಃ ಈ ಪ್ರಕರಣದ ಬಗ್ಗೆ ನೀವು ಏನಾದರೂ ಹೇಳಲು ಇಚ್ಛಿಸುತ್ತೀರಾ?

ಆರೋಪಿಯ ಉತ್ತರಃ

ಪ್ರಶ್ನೆ **6** ಃ ನಿಮ್ಮ ಪರ ಯವುದಾದರೂ ಸಾಕ್ಷಿಯನ್ನು ವಿಚಾರಣೆ ಮಾಡುತ್ತೀರಾ?

ಆರೋಪಿಯ ಉತ್ತರಃ

(ಮೇಲ್ಕಂಡಂತೆ ಆಪಾದಿತರಿಗೆ ತಿಳಿದ ಭಾಷಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಪ್ರಶ್ನಿಸಿ, ಅವರು ನೀಡಿದ ಹೇಳಿಕೆಯನ್ನು ಪಡೆದುಕೊಳ್ಳಲಾಯಿತು.)

ದಿನಾಂಕಃ 13.02.2026
ಸ್ಥಳಃ ಯಾದಗಿರಿ

ಪ್ರಧಾನ ಸಿವಿಲ್ ಮತ್ತು ಜೆ ಎಂ ಎಫ ಸಿ
ನ್ಯಾಯಾಧೀಶರು,ಯಾದಗಿರಿ.